ಮೂಲ ದಾವಾ ಸಂಖ್ಯೆ. 127/2017 ಪಿ ಡಬ್ಲ್ಯೂ 2

(ದಿನಾಂಕ 31-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ ಬಿ ಪಿ ವಕೀಲರಿಂದಃ-

ನಾನು ಜಿ ಕೋಡಿಹಳ್ಳಿ ಗ್ರಾಮದ ವಾಸಿ ಎಂದರೆ ಸರಿ. ಫ್ರಾಸಾ-3 ಫಕೀರಮ್ಮ ನನ್ನ ಅಕ್ಕ ಎಂದರೆ ಸರಿ. ನನ್ನ ತಾಯಿಯ ಹೆಸರು ಶಾಂತಮ್ಮ. ನನ್ನ ತಂದೆಯ ಹೆಸರು ಡೊಳ್ಳಿನ ಹನುಮಂತಪ್ಪ ಎಂದರೆ ಸರಿ. ಶಾಂತಮ್ಮ ಮತ್ತು ವಾದಿಯ ತಾಯಿ ಸಹೋದರಿಯರು ಎಂದರೆ ಸರಿ. ನನಗೆ ಸಾಕ್ಷಿ ನುಡಿಯಲು ಕಢ್ಲೆಪ್ಪ ಇವರು ಕರೆದುಕೊಂಡು ಬಂದಿದ್ದಾರೆ. ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಬರೆಯಲು ಕಢ್ಲೆಪ್ಪರವರು ಮಾಹಿತಿ ನೀಡಿದ್ದಾರೆ ನನಗೆ ದಾವಾಸ್ತಿಯ ಬಗ್ಗೆ ಮಾಹಿತಿ ಇಲ್ಲವೆಂದರೆ ಸರಿಯಲ್ಲ.

ಸರ್ವೆ ನಂ. 107 ಒಟ್ಟು 9 ಎಕರೆ ಜಮೀನು. ಸದರಿ ಜಮೀನಿನಲ್ಲಿ ನನ್ನ ಭಾಗದ್ದು ಮಾರಾಟ ಮಾಡಿದ್ದೇನೆ ಉಳಿದ ಜಮೀನನ್ನು ನನ್ನ ತಮ್ಮ ಕಢ್ಲೆಪ್ಪ ಮತ್ತು ಕೊಟ್ರಪ್ಪ ಸಾಗು ಮಾಡುತ್ತಿದ್ದಾರೆ. ಪ್ರತಿವಾದಿ ಕೊಟ್ರೇಶ್ ಸಾಗು ಮಾಡುವ ಜಮೀನನ್ನು ನಾನು ನೋಡಿದ್ದೇನೆ. ಪ್ರತಿವಾದಿಯ ಜಮೀನಿನ ಪೂಃ ವಾರದ ಕೊಟ್ರೇಶಿ ಮತ್ತು ಉಗ್ಗಣ್ಣನವರ ಮೈಲಪ್ಪನವರ ಜಮೀನು ಇದೆ ಎಂದರೆ ಸರಿ. ಅದೇ ರೀತಿ ಪಃ ಗಬ್ಬೂರು ಕೊಟ್ರೇಶಿ ಮತ್ತು ಸೊಬಟಿ ಕರಿಯಮ್ಮ ಇವರ ಜಮೀನು ಇದೆ ಎಂದರೆ ಸರಿ. ಉಃ ಉಗ್ಗಣ್ಣನವರ ಮೈಲಮ್ಮ ಇವರ ಜಮೀನು ಇದೆ ಎಂದರೆ ಸರಿ ಹಾಗೂ ದಃ ಹುಲ್ಮನಿ ಮಂಜಪ್ಪ ಮತ್ತು ವಾರದ ನಿಂಗಪ್ಪ ಇವರ ಜಮೀನು ಇದೆ ಎಂದರೆ ಸರಿ. ನಾನು ಜಮೀನನ್ನು ಬಿ ಶೇಖರಪ್ಪ ಇವರಿಗೆ ಮಾರಾಟ ಮಾಡಿದ್ದೇನೆ ಅವರು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ಮೇಲೆ ಹೇಳಿದ ಚಕ್ಕುಬಂದಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾನೆಂದರೆ ಸರಿ, ಸಾಕ್ಷಿ ಮುಂದುವರೆದು ಕಢ್ಲೆಪ್ಪ ಸಾಗು ಮಾಡುತ್ತಾರೆಂದು ನುಡಿಯುತ್ತಾರೆ.

ನಿಮ್ಮ ಸಾಕ್ಷಿ ಪ್ರಮಾಣಪತ್ರದಲ್ಲಿ ಚಿಲಗೋಡು ಗ್ರಾಮದ ನಂಬಿಕಸ್ಥರಿಗೆ ಸಾಗುವಳಿ ಮಾಡಲು ಲಾವಣಿ ರೂಪದಲ್ಲಿ ಕೊಟ್ಟಿದ್ದು ಅಂತಾ ಬರೆಸಿದ್ದು ಅವರ ಹೆಸರೇನು ಎಂದರೆ ನನಗೆ ಗೊತ್ತಿಲ್ಲ. ನಾನು ಸನ್ 1978 ರಲ್ಲಿ ನನ್ನ ಜಮೀನನ್ನು ಮಾರಾಟ ಮಾಡಿದ್ದೇನೆ ಅಲ್ಲಿಂದ ನಾನು ದಾವಾ ಜಮೀನಿಗೆ ಹೋಗಿರುವುದಿಲ್ಲ. ಆ ಕಾರಣದಿಂದಾಗಿ ದಾವಾ ಸ್ವತ್ತಿನಲ್ಲಿ ಯಾರು

ಸ್ವಾಧೀನದಲ್ಲಿರುತ್ತಾರೆಂದು ನಿಮಗೆ ಗೊತ್ತಿಲ್ಲವೆಂದರೆ ಸರಿಯಲ್ಲ. ಕಡ್ಲೆಪ್ಪ ಇವರು ನನ್ನ ಸಹೋದರನಾಗಿರುವುದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(2 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಆದರೆ 2 ನೇ ಪ್ರತಿವಾದಿಯು ಪ್ರತಿವಾದ ಪತ್ರ ಸಲ್ಲಿಸಿಲ್ಲ ಆದ್ದರಿಂದ ಪಾಟೀ ಸವಾಲು ಏನೂ ಇಲ್ಲವೆಂದು ತೆಗೆದುಕೊಳ್ಳಲಾಯಿತು)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ